ಪತ್ರವನ್ನು ತೆಗೆದು ಅವನ ಕೈಗೆ ಕೊಟ್ಟು 'ಇಕೋ ಪುತ್ತಾ, ಇದು ಮಾತ್ರ ಬಿಚ್ಚಿ ಓದಿ ಹೇಳು' ಎಂದಳು.

ಪಾಂಡೂ ಅಣ್ಣ ಕವರನ್ನು ಒಡೆದು ತೆಗೆದು ಉದ್ದದ ಎರಡು ಹಾಳೆಯ ಪತ್ರ ಹೊರಗೆತೆಗೆದು ಮಡುಚಿದ್ದನ್ನು ಬಿಚ್ಚಿ 'ಅಬ್ಬಾ ದೊಡ್ಡ ಪತ್ರ' ಎಂದು ಆಚೆ ಈಚೆ ಮೇಲೆ ಕೆಳಗೆ ತಿರುವಿ ಪತ್ರ ಸುರು ಮಾಡಿದ್ದನ್ನು ಹುಡುಕಿ ತೆಗೆದು ಓದಿಗೆ ಸುರುವಾತ ಮಾಡಿದ.

ಬಲಗಡೆಯ ತುದಿಯಲ್ಲಿ ಕಣ್ಣು ಹಾಯಿಸಿ ಊರು ತಾರೀಖು ಎಲ್ಲ ಹೇಳಿ 'ಹುಂ, ನಿನ್ನ ಮಗಳದೇ ಸೀತಕ್ಕ. ಅದೇ ಊರು ಈಗ ವರ್ಗವಾಗಿದೆಯಲ್ಲ– ಅಲ್ಲಿಂದಲೇ ಬಂದಂತಿದೆ. ಹುಂ, ಕೇಳು' ಎಂದು ಹೇಳಿ ಪತ್ರದ ಸುದ್ದಿಯನ್ನು ಓದುವುದಕ್ಕೆ ಪ್ರಾರಂಭಿಸಿದ.

'ತೀರ್ಥರೂಪ ಸೀತಕ್ಕನವರ ಚರಣಗಳಿಗೆ ತಮ್ಮ ಚಿ||... ಎಂದೊಡನೇ ಅಲ್ಲಿಗೆ ನಿಂತು ಅನಂತರ ದೊಡ್ಡಕ್ಕೆ ನಕ್ಕುಬಿಟ್ಟ. ಅವನಿಂದ ನಗುತಡೆಯುವುದಾಗಲಿಲ್ಲ. ಮಳೆಗಾಲದಲ್ಲಿ ತುಂಬಿ ಹರಿಯುವ ಮುರ್ಕುಂಡಿ ದೇವಸ್ಥಾನದ ಹಳ್ಳದ ಹಾಗೆ ಅವನ ನಗು ಧ್ವನಿಗೊಂಡು ಹರಿಯಿತು. ನಿಲ್ಲಲ್ಲೇ ಇಲ್ಲ. ಸೀತಕ್ಕನಿಗೆ ಏನೂ ಅರ್ಥವಾಗಲಿಲ್ಲ,

'ಯಾಕಪ್ಪ ಯಾಕೆ?' ಎಂದಳು.

ಅದಕ್ಕೆ ಅವನು ನಗು ನಿಲ್ಲಸದೇ 'ಸೀತಕ್ಕ ಇದು. ಈ ಪತ್ರ ನಿನ್ನ ಮಗಳದಲ್ಲ' ಎಂದು ಒಂದು ಕೈಯಲ್ಲಿ ಹೊಟ್ಟೆ ಹಿಡಿದುಕೊಂಡ.

'ಆಂ? ಯಾರದು ಹಾಗಾದರೆ?'

'ಸೀತಕ್ಕ ಇದು ಮಾಳಪ್ಪ ಶ್ಯಾನುಭೋಗರ ಪತ್ರ– ನಿನ್ನ ಮಗಳದಲ್ಲ' ಎಂದ ಅವನು, ಅದೇ ಅಬ್ಬರದಲ್ಲಿ.

'ಆಂ? ಮಾ... ಳ... ಪ್ಪ... ಶ್ಯಾ... ನು... ಭೋ... ಗ... ರ...s ಪತ್ರ... ಇದು... !!?

ರಣರಣ ಬಿಸಿಲು ಘಳಿಗೆ, ಘಳಿಗೆ ಸೀತಕ್ಕನಿಗೆ ಕತ್ತಲಾಗಿ ತೋರಿತು. ಕಣ್ಣು ಪಿಳಿಪಿಸಿ ಅದನ್ನು ತಡೆಯುವಷ್ಟರಲ್ಲಿ ಇಡೀ ಹಿತ್ತಲೆಲ್ಲ ಗರಗರನೇ ತಿರುಗ ಹತ್ತಿತ್ತು. ಒಂದೇ ನಿಮಿಷದಲ್ಲಿ ಹೊನ್ನಾವರದ ಎಲ್ಲ ಹಳ್ಳಿ ತಿರುಗಿ ಬಂದಂತೆ ನಡುಗಿದಳು. ನಿಂತ ನೆಲ ಕುಸಿದು ತಾನು ನೆಲದ ಅಡಿಗೆ ಹೋಗುತ್ತಿರುವಳೇನೋ ಎಂದನಿಸಿದಂತಾಗಿ ಅಲ್ಲಿಯೇ ಖುರ್ಚಿಯ ಪಕ್ಕದ ಕಂಬವನ್ನು ಹಿಡಿದು ಧಸಕ್ಕನೇ ಕುಳಿತಳು. ಪತ್ರ ಕೇಳುವುದನ್ನು ಮರೆತು ತಂಬಿಗೆ ನೀರು ಕೇಳಿದಳು– ಕುಡಿಯುವುದಕ್ಕೆ ಅಲ್ಲಿಯತನಕ. ಪಾಂಡೂ ಅಣ್ಣ ಪತ್ರವನ್ನು ಪೂರ ಓದಿ ಅದರಲ್ಲಿಯ ಸುದ್ದಿಯನ್ನು ತಿಳಿದು ಸೀತಕ್ಕ ಸುಧಾರಿಸಿಕೊಂಡ ಮೇಲೆ ಇದ್ದಕ್ಕಿದ್ದ ಹಾಗೆ ಎಲ್ಲವನ್ನೂ ಹೇಳಿ ಮುಗಿಸಿದ. ಉಂಡದ್ದನ್ನು ಕೂಡ ಮರೆತು ಸೀತಕ್ಕ ಹಸಿವು ಹಿಡಿದವರಂತೆ ಪಾಂಡೂ ಅಣ್ಣನನ್ನೇ ಕೇಳುತ್ತ ಕುಳಿತಳು.

'ಮಾಳಪ್ಪ ಶ್ಯಾನುಭೋಗರು ಬರುವ ಮಂಗಳವಾರ ನಿನ್ನ ಮಗಳನ್ನು ಕರಕೊಂಡು ಇಲ್ಲಿಗೆ ಬರುತ್ತಾರೆ. ಅವರಿಬ್ಬರೂ ಇರುವುದು ಒಂದೇ ಊರಿನಲ್ಲಿ. ಉಳಿಯುವುದು ಕೂಡ ಒಂದೇ ಮನೆಯಲ್ಲಿ. ಹೊಸದಾಗಿ ಬಂದಾಗ ಆ ಊರಿನಲ್ಲಿ ಉಳಿಯುವ ಮನೆ ಸಿಗದಿದ್ದರಿಂದ ಶ್ಯಾನುಭೋಗರೇ ಹೇಳಿ ಅವಳನ್ನು ತಮ್ಮ ಮನೆಯಲ್ಲಿ ಉಳಿಸಿಕೊಂಡರಂತೆ. ಅವರಿಗೂ ಅನುಕೂಲ ಇವಳಿಗೂ ಅನುಕೂಲವಾಗಿರುವುದರಿಂದ ಕೂಡಿಯೇ ಇದ್ದಾರೆ. ಇನ್ನು ನಿನ್ನ ಮಗಳ ಕಾಳಜಿ ದೂರವಾಗುತ್ತದೆ. ಅವರಿಬ್ಬರೂ ಕ್ಷೇಮವಾಗಿಯೂ ಆನಂದದಿಂದಲೂ ಇದ್ದಾರೆ. ಹುಂ, ನಿನ್ನ ಹತ್ತಿರ ಏನೋ ಒಂದು ವಿಷಯ ಅವರಿಬ್ಬರೂ ಪ್ರತ್ಯಕ್ಷ ಬಂದು ಮಾತನಾಡಬೇಕಾಗಿದೆಯಂತೆ. ಮಾತನಾಡಿ ನಿರ್ಧರಿಸಬೇಕಾಗಿದೆಯಂತೆ. ಇನ್ನೇನು? ಬಾಕಿ ಸಂಗತಿ ಮೊಕ್ತಾ.'

ಇದೆಲ್ಲ ಕೇಳಿ ನಂಬಬೇಕೋ ಬೇಡವೋ ಎನಿಸಿತು ಅವಳಿಗೆ. ಮನಸ್ಸಿನಲ್ಲಿ ಗೊಂದಲವೆದ್ದಂತೆ ಆಯಿತು. ಆದರೆ ಆ ಗೊಂದಲ ಬರುವ ದಿನಗಳ ಕುರಿತು ಬಯಸಿ ಬಂದಂತಹದು. ತಲೆಯಲ್ಲಿ